# **ಕರ್ನಾಟಕ ವಿಧಾನ ಪರಿಷತ್ತು**

ಸಂಖ್ಯೆ:ಕವಿಪ/ಆ-2/226/ಹೆಕಾಸೌ/22

ವಿಧಾನ ಪರಿಷತ್ತಿನ ಸಚಿವಾಲಯ,
ಅಂಚೆ ಪೆಟ್ಟಿಗೆ ಸಂಖ್ಯೆ:5079, ವಿಧಾನ ಸೌಧ,
ಬೆಂಗಳೂರು-560 001, ದಿನಾಂಕ:13.10.2022

## ಸು ತ್ತೋ ಲೆ

**ವಿಷಯ: ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರರು ಹಾಗೂ ಅವರ ಅವಲಂಬಿತ ಕುಟುಂಬದ ಸದಸ್ಯರುಗಳಿಗೆ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ** ಹೊರರೋಗಿ/ ಒಳರೋಗಿಯಾಗಿ ಚಿಕಿತ್ಸೆಯನ್ನು ನೀಡುವ ಬಗ್ಗೆ.

*****

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರರು ಮತ್ತು ಅವರ ಅವಲಂಬಿತ ಕುಟುಂಬ ಸದಸ್ಯರುಗಳಿಗೆ **ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ** ಹೊರರೋಗಿ/ ಒಳರೋಗಿಯಾಗಿ ಚಿಕಿತ್ಸೆ ಪಡೆಯುವ ಬಗ್ಗೆ ದಿನಾಂಕ:26.09.2022 ರಿಂದ ಜಾರಿಗೆ ಬರುವಂತೆ ಮೂರು ವರ್ಷಗಳ ಅವಧಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ.

ಈ ಒಪ್ಪಂದದ ಅನ್ವಯ **ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು,** (ಬೆಂಗಳೂರು, ಕಲಬುರಗಿ ಹಾಗೂ ಮೈಸೂರು ಶಾಖೆಗಳನ್ನೊಳಗೊಂಡಂತೆ) ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರರು ಹಾಗೂ ಅವರ ಅವಲಂಬಿತ ಕುಟುಂಬದ ಸದಸ್ಯರುಗಳಿಗೆ ಹೊರರೋಗಿ/ಒಳರೋಗಿಯಾಗಿ ಚಿಕಿತ್ಸೆ ನೀಡುವುದು. ಸದರಿ ಸಂಸ್ಥೆಯು ಯಾವುದೇ ನಗದನ್ನು/ ಭದ್ರತಾ ಮೊತ್ತವನ್ನು ಕಟ್ಟಿಸಿಕೊಳ್ಳದೇ ಕೇವಲ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯವು ನೀಡಿರುವ ಗುರುತಿನ ಚೀಟಿ/ಅಧಿಕೃತ ದೃಢೀಕರಣ ಪತ್ರದ ಆಧಾರದ ಮೇರೆಗೆ ಅವರುಗಳನ್ನು ಸಂಸ್ಥೆಯು ದಾಖಲು ಮಾಡಿಕೊಳ್ಳುವುದು/ ಚಿಕಿತ್ಸೆ ನೀಡುವುದು. ಹಾಸಿಗೆಗಳ ಲಭ್ಯತೆಗೆ ಒಳಪಟ್ಟು ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರರು ಹಾಗೂ ಅವರ ಅವಲಂಬಿತ ಕುಟುಂಬದ ಸದಸ್ಯರುಗಳನ್ನು ಆದ್ಯತೆಯ ಆಧಾರದ ಮೇಲೆ ಪೂರ್ವಯೋಜಿತ ಮತ್ತು ತುರ್ತು ಚಿಕಿತ್ಸೆಗೆ ಸಂಸ್ಥೆಯು ದಾಖಲು ಮಾಡಿಕೊಳ್ಳುವುದು.

ಪೂರ್ವಯೋಜಿತ ಚಿಕಿತ್ಸೆಗೆ ದಾಖಲು ಮಾಡಿಕೊಳ್ಳಲಾಗುವ ಪ್ರಕರಣಗಳಲ್ಲಿ ದಾಖಲಾತಿಯನ್ನು ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯವು ಮುಂಚಿತವಾಗಿ ನೀಡುವ ಅಧಿಕೃತ ದೃಢೀಕರಣ ಪತ್ರದ ಆಧಾರದ ಮೇಲೆ **ನಗದು ರಹಿತ ಸೌಲಭ್ಯಕ್ಕೆ** ದಾಖಲು ಮಾಡಿಕೊಳ್ಳಲಾಗುವುದು. ಸಚಿವಾಲಯವು ಅಂಗೀಕಾರ್ಹ ಮೊತ್ತವನ್ನು ಪಾವತಿ ಮಾಡಲು ಮಾತ್ರ ಬದ್ಧವಾಗಿರುತ್ತದೆ.

ಅಧಿಕಾರಿ/ನೌಕರರು ಅಥವಾ ಅವರ ಅವಲಂಬಿತ ಕುಟುಂಬ ಸದಸ್ಯರುಗಳಿಗೆ ತುರ್ತು ಚಿಕಿತ್ಸೆಗಾಗಿ ದಾಖಲಾತಿಯು ಅಥವಾ ತುರ್ತು ಚಿಕಿತ್ಸೆ ಅವಶ್ಯವಾದಲ್ಲಿ, ಸಂಸ್ಥೆಯು ಅಂತಹ ರೋಗಿಯನ್ನು ಸಚಿವಾಲಯವು ನೀಡಿರುವ ಗುರುತಿನ ಚೀಟಿಯ ಆಧಾರದ ಮೇಲೆ ಒಪ್ಪಂದದ ಅನುಬಂಧದಲ್ಲಿರುವ **ಘೋಷಣಾ ಪತ್ರವನ್ನು** ಪಡೆದು ದಾಖಲು ಮಾಡಿಕೊಳ್ಳಲಾಗುತ್ತದೆ. ತದನಂತರ, ಸಂಸ್ಥೆಯು, ಸದರಿ ದಾಖಲಾತಿಯ ಬಗ್ಗೆ ಸಚಿವಾಲಯಕ್ಕೆ ಮಾಹಿತಿ ನೀಡುತ್ತದೆ.

ಸಂಸ್ಥೆಯು ವಿಧಾನ ಪರಿಷತ್ತಿನ ಸಚಿವಾಲಯಕ್ಕೆ ಬಿಲ್ಲುಗಳನ್ನು ಕಳುಹಿಸುತ್ತದೆ. ಸದರಿ ವೈದ್ಯಕೀಯ ವೆಚ್ಚದ ಮರು ಪಾವತಿಯ ಬಿಲ್ಲುಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯವು ದೃಢೀಕರಿಸುವ ದರಗಳ ಆಧಾರದ ಮೇಲೆ ಪರಿಗಣಿಸಲಾಗುವುದು. ಅಂಗೀಕಾರ್ಹ ಮೊತ್ತವನ್ನು ಹೊರತುಪಡಿಸಿದ ಅನರ್ಹ ಮೊತ್ತವನ್ನು ರೋಗಿಗಳು ಸದರಿ ಸಂಸ್ಥೆಗೆ ನೇರವಾಗಿ ಪಾವತಿಸಬೇಕಾಗುತ್ತದೆ ಹಾಗೂ ಒಂದು ವೇಳೆ ರೋಗಿಗಳು ಹಣ ಪಾವತಿಸಲು ವಿಫಲರಾದಲ್ಲಿ, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯವು ಸದರಿ ಮೊತ್ತಕ್ಕೆ ಜವಾಬ್ದಾರಿ ಆಗುವುದಿಲ್ಲ.

ಒಪ್ಪಂದದಲ್ಲಿ, **ಕುಟುಂಬ ಸದಸ್ಯರು** ಎಂಬ ಪದವು ಈ ಕೆಳಕಂಡ ಅರ್ಥವನ್ನು ಒಳಗೊಂಡಿರುತ್ತದೆ.

1. ಸರ್ಕಾರಿ ನೌಕರರ ಪತಿ/ ಪತ್ನಿ
2. ಸರ್ಕಾರಿ ನೌಕರರ ತಂದೆ ಮತ್ತು ತಾಯಿ (ಮಲತಾಯಿ ಒಳಗೊಂಡಂತೆ). ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) (ತಿದ್ದುಪಡಿ) ನಿಯಮಗಳು 1963ರ ಅನ್ವಯ ರಾಜ್ಯ ಸರ್ಕಾರಿ ನೌಕರರ ಅವಲಂಬಿತ ತಂದೆ ಮತ್ತು ತಾಯಿಯವರ ವೈದ್ಯಕೀಯ ವೆಚ್ಚ ಮರುಪಾವತಿಯ ಪ್ರಕರಣಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ಅವರ ಮಾಸಿಕ ಆದಾಯದ ಮಿತಿಯನ್ನು ರಾಜ್ಯ ಸರ್ಕಾರವು ನಿಗಧಿಪಡಿಸಿರುವ ಕನಿಷ್ಟ ಮೂಲ ಪಿಂಚಣಿ ರೂ. 8500/-ಗಳು ಹಾಗೂ ಅದಕ್ಕೆ ಆರ್ಥಿಕ ಇಲಾಖೆಯು ಕಾಲಕಾಲಕ್ಕೆ ನಿಗಧಿಪಡಿಸಿದಂತೆ ಲಭ್ಯವಾಗುವ ತುಟ್ಟಿಭತ್ಯೆಯ ದರಗಳನ್ನು ಸೇರಿಸಿ ಒಳಗೊಂಡ ಮೊತ್ತವನ್ನು ಮಾಸಿಕ ಆದಾಯವೆಂದು ಪರಿಗಣಿಸತಕ್ಕದ್ದು.
3. ಮಕ್ಕಳು (ದತ್ತು ಮಕ್ಕಳು ಹಾಗೂ ಮಲತಾಯಿ ಮಕ್ಕಳು ಒಳಗೊಂಡಂತೆ) ಇವರು ಸರ್ಕಾರಿ ನೌಕರರ ಮೇಲೆ ಸಂಪೂರ್ಣವಾಗಿ ಅವಲಂಬಿತರಾಗಿರತಕ್ಕದ್ದು ಮತ್ತು ಯಾವುದೇ ಉದ್ಯೋಗ ಅಥವಾ ಆದಾಯವನ್ನು ಹೊಂದಿರತಕ್ಕದ್ದಲ್ಲ.

ಇವರುಗಳು ಸರ್ಕಾರಿ ನೌಕರನ ಮೇಲೆ ಸಂಪೂರ್ಣವಾಗಿ ಅವಲಂಬಿತರಾಗಿದ್ದು ಹಾಗೂ ನೌಕರನೊಂದಿಗೆ ಸಾಮಾನ್ಯವಾಗಿ ವಾಸವಿರತಕ್ಕದ್ದು.

ಆದುದರಿಂದ, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರರು ಹಾಗೂ ಅವರ ಅವಲಂಬಿತ ಕುಟುಂಬದ ಸದಸ್ಯರುಗಳು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಚಿಕಿತ್ಸಾ ಸೌಲಭ್ಯವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

13/10/22

**(ಕೆ.ಜೆ. ಜಲಜಾಕ್ಷಿ)**
ಅಧೀನ ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಗೆ,
ಈ ಸಚಿವಾಲಯದ ಎಲ್ಲಾ ಅಧಿಕಾರಿ/ ನೌಕರರುಗಳಿಗೆ. (ಶಾಸಕರ ಭವನವೂ ಒಳಗೊಂಡಂತೆ)

ಪ್ರತಿಗಳು:
1. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರಿಗೆ, ಕವಿಪ
2. ಕಾರ್ಯದರ್ಶಿಯವರ ಪತ್ರಾಂಕಿತ ಸಹಾಯಕರಿಗೆ, ಕವಿಪ
3. ಅಪರ ಕಾರ್ಯದರ್ಶಿ/ ಜಂಟಿ ಕಾರ್ಯದರ್ಶಿಯವರ ಸಹಾಯಕರಿಗೆ, ಕವಿಪ
4. ಸಂಬಂಧಪಟ್ಟ ಕಡತಕ್ಕೆ/ ರಕ್ಷಾ ಕಡತಕ್ಕೆ